**ಸಾಕ್ಷಿಯನ್ನು ದಿಃ19.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಸ.ನಂ.50 ರಲ್ಲಿ ಒಟ್ಟು 3 ಎಕರೆ 2 ಗುಂಟೆ ಜಮೀನು ಇದೆ. ಆ ಪೈಕಿ ದಾಸ ಎಂಬುವವರು 30 ವರೆ ಗುಂಟೆ ಖರೀದಿ ಮಾಡಿದ್ದಾರೆ.

2. ಸ.ನಂ.50 ರ ಮೂಲ ಮಾಲೀಕರು ಯಾರು ಎಂದರೆ ಗೊತ್ತಿಲ್ಲ.

3. ಲಕ್ಕಯ್ಯರವರ ತಂದೆ ಹೆಸರು ಕಾಳ ಬಿನ್ ದಾಸ ಎಂದರೆ, ಸರಿಯಲ್ಲ ಅಂಚೆ ಕಾಳ ಎಂದು ನುಡಿಯುತ್ತಾರೆ. ಅಂಚೆ ಕಾಳನ ತಂದೆ ಹೆಸರು ನನಗೆ ಗೊತ್ತಿಲ್ಲ.

4. 3 ಎಕರೆ 2 ಗುಂಟೆ ಜಮೀನು ಯಾರ್ಯಾರ ಹೆಸರಿನಲ್ಲಿ ರೆವಿನ್ಯೂ ದಾಖಲೆ ಇವೆ ಎಂದರೆ, ಪುಟ್ಟಮ್ಮನ ಹೆಸರಿನಲ್ಲಿ 1 ಎಕರೆ ಹಾಗೂ 2 ಎಕರೆ 2 ಗುಂಟೆ 2 ನೇ ಪ್ರತಿವಾದಿ ರಾಜು ರವರು ಬರೆಸಿಕೊಂಡಿದ್ದಾರೆ.

5. ರಾಜು ರವರು ಪಹಣಿಯಲ್ಲಿ ಹಾಗೂ ರೆವಿನ್ಯೂ ದಾಖಲೆಗಳಲ್ಲಿ ಬರೆಸಿಕೊಂಡಿದ್ದಾರಾ ಎಂದರೆ, ಪಹಣಿ ಮಾಡಿಕೊಂಡಿದ್ದಾರೆ. ಅದಕ್ಕಿಂತ ಮುಂಚೆ ರಾಜು ರವರ ತಂದೆ ಹೆಸರಿನಲ್ಲಿ ಪಹಣಿ ಬರುತ್ತಿತ್ತು ಎಂದರೆ, ಹೌದು. ಸಾಕ್ಷಿ ಮುಂದುವರಿದು ಕಾಳದಾಸನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ.

6. ಸ.ನಂ.50 ರ ಪಹಣಿಯನ್ನು ಹಿಂದಿನಿಂದಲೂ ಪಡೆದುಕೊಳುತ್ತಿದ್ದೀರಾ ಎಂದರೆ ಕ್ರಯ ಪತ್ರ ಆದ ಮೇಲೆ ಪಡೆದುಕೊಳ್ಳುತ್ತಿದ್ದೇವೆ.

7. ಸದರಿ ಕ್ರಯಪತ್ರ ನನ್ನ ದೊಡ್ಡಪ್ಪ ದಾಸ ರವರ ಹೆಸರಿಗೆ ಆಗಿದೆ. ದಾಸ ರವರ ತಂದೆ ಹೆಸರು ದಾಸೇಗೌಡ.

8. ದಾಸೇಗೌಡರ ಮಗ ದಾಸನಿಗೆ ಎಷ್ಟು ಜನ ಮಕ್ಕಳು ಎಂದರೆ ದಾಸನಿಗೆ ಮದುವೆ ಆಗಿಲ್ಲ.

9. ಸದರಿ ದಾಸೇಗೌಡರ ತಂದೆ ಹೆಸರು ನನಗೆ ಗೊತ್ತಿಲ್ಲ. ಸದರಿ ದಾಸೇಗೌಡರ ವಂಶವೃಕ್ಷ ಗೊತ್ತಾ ಎಂದರೆ, ಗೊತ್ತಿಲ್ಲ.

10. ಗಂಗಮಾಳಮ್ಮನ ಗಂಡ ತಿಮ್ಮಪ್ಪ ಹಾಗೂ ಮೂಲ ಪುರುಷ ದಾಸೇಗೌಡರಿಗೆ ಏನು ಸಂಬಂಧ ಎಂದರೆ, ಅಣ್ಣ ತಮ್ಮಂದಿರು.

11. ನೀವು ಮೂಲ ಪುರುಷ ದಾಸೇಗೌಡನ ವಂಶಸ್ಥರು ಎಂದು ತೋರಿಸಲು ದಾಖಲೆ ಇವೆಯಾ ಎಂದರೆ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ಏನು ಕೊಟ್ಟಿದ್ದೀರಾ ಎಂದರೆ, ಮರಣ ಪ್ರಮಾಣ ಪತ್ರ ಕೊಟ್ಟಿದ್ದೇವೆ.

12. 3 ಎಕರೆ 2 ಗುಂಟೆ ಜಮೀನಿನಲಿ ಕಾಳಮ್ಮ, ರಾಜ, ಗಣೇಶ ಹಾಗೂ ಗೌರಮ್ಮ ರವರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ 2 ಎಕರೆ 2 ಗುಂಟೆ ಇದೆಯಾ ಎಂದರೆ, ಹೌದು.

13. 30 ವರೆ ಗುಂಟೆ ನಿಮ್ಮ ಹೆಸರಿಗೆ ಖಾತೆ ಆಗಬೇಕು ಎಂದು ಅರ್ಜಿ ನೀಡಿದ್ದೀರಾ ಎಂದರೆ, ನೀಡಿದ್ದೇವೆ. ಅಷ್ಟರಲ್ಲಿ ರಾಜು ರವರು ಖಾತೆ ಮಾಡಿಸಿಕೊಂಡಿರುತ್ತಾರೆ. ಅವರು ಖಾತೆ ಮಾಡಿಸಿಕೊಂಡ ಬಗ್ಗೆ ಅಪೀಲು ಹಾಕಿದ್ದೀರಾ ಎಂದರೆ, ಎ.ಸಿ ಕೋರ್ಟಿಗೆ ಹಾಕಿದ್ದೇವೆ. ಅಲ್ಲಿ ಇನ್ನೂ ತೀರ್ಮಾನ ಆಗಿಲ್ಲ.

14. ಈ ದಾವೆ ಹಾಕಲು ಕಾರಣ ಏನು ಎಂದರೆ ರಾಜು ನಮ್ಮ ಭೂಮಿಯನ್ನು ಬರೆಸಿಕೊಂಡಿದ್ದಾರೆ ಎಂದು ಹಾಕಿರುತ್ತೇವೆ. ಎಷ್ಟನೇ ತಾರೀಖು, ತಿಂಗಳು ಹಾಗೂ ಇಸವಿಯಲ್ಲಿ ಬರೆಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನನಗೆ ಗೊತ್ತಾಗಿ 6 ವರ್ಷ ಆಗಿದೆ.

15. ನಮ್ಮ ಹಾಗೂ ರಾಜು ಅಥವಾ ಅವರ ಕುಟುಂಬದ ಸದಸ್ಯರ ನಡುವೆ ದಾವಾ ಜಮೀನು ವಿಚಾರವಾಗಿ ಯಾವುದೇ ಗಲಾಟೆ ಆಗಿಲ್ಲ.

16. ದಾವಾ ಜಮೀನು ರಾಜು ರವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಅವರ ಕುಟುಂಬದವರಾದ ಕರೀಗೌಡರು ನನ್ನ ದೊಡ್ಡಪ್ಪನಿಗೆ ಬರೆದುಕೊಟ್ಟಿದ್ದಾರೆ.

17. ದಾವಾ ಸ್ವತ್ತು 30 ವರೆ ಗುಂಟೆ ಜಾಗ 3 ಎಕರೆ 2 ಎಕರೆ ಪೈಕಿ ನಿಖರವಾಗಿ ಯಾವ ಜಾಗದಲ್ಲಿದೆ ಎಂದರೆ, ನನಗೆ ದಿಕ್ಕು ಗೊತ್ತಾಗುವುದಿಲ್ಲ, ಪುಟ್ಟಮ್ಮನ ಜಮೀನು ಕಡೆಗೆ ಇದೆ.

18. ಪುಟ್ಟಮ್ಮನವರ ಸರ್ವೇ ನಂಬರ್ ಎಷ್ಟು ಎಂದು ನನಗೆ ಗೊತ್ತಿಲ್ಲ.

19. ಪುಟ್ಟಮ್ಮನವರ ಜಮೀನಿನ ಚಕ್ಕುಬಂದಿ ಗೊತ್ತಾ ಎಂದರೆ ಗೊತ್ತು. ದಕ್ಷಿಣಕ್ಕೆ ಯಾರ ಜಮೀನು ಎಂದರೆ, ರಾಜು ರವರ ಜಮೀನು, ಉತ್ತರಕ್ಕೆಃ ಉಂಬಳಿ ಜಮೀನು, ನಮ್ಮದೂ ಸೇರಿಕೊಳ್ಳುತ್ತದೆ. ಪಶ್ಚಿಮಕ್ಕೆಃ ಪರಮೇಶ ರವರ ಜಮೀನು, ಪೂರ್ವಕ್ಕೆಃ ರಸ್ತೆ ಇದೆ.

20. ನಿಮ್ಮ ಜಮೀನಿಗೆ ದಾವೆಯಲ್ಲಿ ನೀವು ಚಕ್ಕುಬಂದಿ ಬರೆಸಿದ್ದೀರಾ ಎಂದರೆ, ಇಲ್ಲ.

21. ನಿಮಗೆ ಮತ್ತು ದಾಸೇಗೌಡರ ಮಗ ದಾಸಯ್ಯ @ ದಾಸನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

22. ನಿಮ್ಮ ತಂದೆ ತಿಮ್ಮಪ್ಪ ಮತ್ತು ದಾಸೇಗೌಡರ ಮಗ ದಾಸಯ್ಯ @ ದಾಸ ಅಣ್ಣ ತಮ್ಮಂದಿರು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

23. ದಾವಾ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು ಸ್ವಾಧೀನ ಹಾಗೂ ಮಾಲೀಕತ್ವ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

24. ನೀವು ಹಾಜರುಪಡಿಸಿರುವ ವಂಶವೃಕ್ಷವನ್ನು ಯಾರು ಬರೆಸಿದ್ದು ಎಂದರೆ, ನಮ್ಮ ಅಣ್ಣನನ್ನು ಕೇಳಬೇಕು. ವಂಶವೃಕ್ಷದಲ್ಲಿ ಏನೇನು ಒಕ್ಕಣಿಕೆಗಳನ್ನು ಬರೆಸಿದ್ದೀರಾ ಎಂದು ಗೊತ್ತಾ ಎಂದರೆ, ನಮ್ಮ ವಶವೃಕ್ಷ ಇರುವುದನ್ನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ.

25. ನಿಮ್ಮ ವಂಶವೃಕ್ಷ ದೃಢೀಕರಣ ಪತ್ರ ಕೊಡುವಂತೆ ನೀವು ತಾಲುಕು ಕಛೇರಿಗೆ ಅರ್ಜಿ ಕೊಟ್ಟಿದ್ದೀರಾ ಎಂದರೆ, ತೆಗೆದುಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ಈ ದಾವೆ ಹಾಕುವ ಮುಂಚೆ ಪಡೆದಿದ್ದೆ. ಅದಕ್ಕೆ ಯಾರು ಮಾಹಿತಿ ಕೊಟ್ಟರು ಎಂದರೆ ನಮ್ಮ ಅಣ್ಣ

ಪುಟ್ಟೇಗೌಡ. ನೀವು ನ್ಯಾಯಾಲಯದ ಮುಂದೆ ಸುಳ್ಳು ವಂಶವೃಕ್ಷ ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

26. ನೀವು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

27. ದಾವಾ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ